# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 25-11-2021 ರಂದು ಆಯೋಜಿಸಿದ್ದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀಮತಿ.ರೇಣುಕಾ ಸ್ವಾದಿ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ |
| 2 | ಶ್ರೀಮತಿ.ಸಾವಿತ್ರಿ. | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 24 ಹೆಚ್.ಬಿ.ಆರ್ ಬಡಾವಣೆ |
| 3 | ಶ್ರೀ.ಮೊಹಮ್ಮದ್ ಇಬ್ರಾಹಿಮ್. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ |
| 4 | ಮೀನಾ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ಶ್ರೀಕಾಂತ್ | ಅಸೆಸರ್, ಕಂದಾಯ ಇಲಾಖೆ. |
| 6 | ಶ್ರೀ. ಪ್ರಸನ್ನ.ಎ.ಆರ್. | ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 7 | ಶ್ರೀ.ಎಸ್.ಜೆ.ತೋಳ್ಪಾಡಿ. | ಅಧ್ಯಕ್ಷರು ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 8 | ಶ್ರೀ.ವಿಕ್ರಂ.ಎಂ.ವಿ. | ಸ್ಥಳೀಯರು |
| 9 | ಶ್ರೀ.ಜೆ.ಅಲೆಕ್ಸಾಂಡರ್ ವಿಜಯ್ ಕುಮಾರ್. | ಸ್ಥಳೀಯರು |
| 10 | ಶ್ರೀ ಪಿಚಾಂಡಿ. | ಸ್ಥಳೀಯರು |
| 11 | ಶ್ರೀ.ಪ್ರತಾಪ್ | ಸ್ಥಳೀಯರು |
| 12 | ಶ್ರೀ.ವಿ.ನಾರಾಯಣಸ್ವಾಮಿ | ಸ್ಥಳೀಯರು |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿ ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1. ವಾರ್ಡ್ ವ್ಯಾಪ್ತಿಯ 18ನೇ ಮುಖ್ಯರಸ್ತೆಯ ದೊಡ್ಡ ಮೋರಿಗೆ ಹೊಂದಿಕೊಂಡಿರುವ ಚರಂಡಿಗಳನ್ನು ಪರಿಶೀಲಿಸಲು ತಿಳಿಸಿರುತ್ತಾರೆ. ನರೇಂದ್ರ ಟೆಂಟ್ ರಸ್ತೆ (80'ಅಡಿ) ರಸ್ತೆಯ ಎಡ ಬದಿಯಲ್ಲಿರುವ ಚರಂಡಿಯಲ್ಲಿ ತುಂಬಿಕೊಂಡಿರುವ ಹೂಳನ್ನು ತೆರವುಗೊಳಿಸಿ ಬೃಹತ್ ನೀರುಗಾಲುವೆಗೆ ಹರಿದು ಹೋಗುವಂತೆ ಕ್ರಮ ಕೈಗೊಂಡು ಚರಂಡಿಯ ಪಕ್ಕದಲ್ಲಿ ವಾಸವಾಗಿರುವ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸಭೆಯಲ್ಲಿ ತಿಳಿಸಿದರು.

   ಈ ವಿಷಯದ ಬಗ್ಗೆ ಕಾಮಗಾರಿ ಇಲಾಖೆ ಬಿಬಿಎಂಪಿ ಮತ್ತು ರಸ್ತೆ ಮೂಲಭೂತ ಸೌಕರ್ಯ ರವರಿಗೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   **(ಕ್ರಮ:- ಸ.ಕಾ.ಅ ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬಿ.ಬಿ.ಎಂ.ಪಿ ಮತ್ತು ರಸ್ತೆ ಮೂಲಭೂತ ಸೌಕರ್ಯ ಬಿ.ಬಿ.ಎಂ.ಪಿ ಪೂರ್ವ)**

2. **<u>ಪೊಲೀಸ್ ಇಲಾಖೆ:-</u>** ವಾರ್ಡ್ ಸಂಖ್ಯೆ.24 ಹೆಚ್.ಬಿ.ಆರ್ ಬಡಾವಣೆ ವ್ಯಾಪ್ತಿಯ ನರೇಂದ್ರ ಟೆಂಟ್ ರಸ್ತೆ ಜಂಕ್ಷನ್ ನಿಂದ ನಾಗವಾರ ಜಂಕ್ಷನ್ ಬಳಿ ಅಂಗಡಿಯ ಮಾಲೀಕರು ಫುಟ್‌ಪಾತ್ ಅನ್ನು ಅತಿಕ್ರಮಣ ಮಾಡಿಕೊಂಡು ವ್ಯಾಪಾರ ನಡೆಸುತ್ತಿದ್ದು, ಸಾರ್ವಜನಿಕರು ಸಂಚರಿಸಲು ಅಡ್ಡಿಯಾಗುವಂತೆ ಫುಟ್‌ಪಾತ್ ಮೇಲೆ ಅಂಗಡಿ ಮುಂಗಟ್ಟು ಹಾಗೂ ವಾಹನಗಳನ್ನು ನಿಲ್ಲಿಸಿಕೊಂಡು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ ಎಂದು ವಾರ್ಡ್ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಸದರಿ ಒತ್ತುವರಿ ಮಾಡಿರುವ ಪಾದಚಾರಿ ರಸ್ತೆಯನ್ನು ತೆರವುಗೊಳಿಸುವ ಕಾರ್ಯಾಚರಣೆ ದಿನಾಂಕ: 14-12-2021 ರಂದು ಉದ್ದೇಶಿಸಿದ್ದು, ಸದರಿ ಕಾರ್ಯಚರಣೆಗೆ ಪೊಲೀಸ್ ಇಲಾಖೆಗೆ ಒತ್ತುವರಿ ತೆರವು ಕಾರ್ಯನಡೆಸಲು ಪಾಲಿಕೆಯ ಸಿಬ್ಬಂದಿಗಳಿಗೆ ಹಾಗೂ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ಒದಗಿಸಲು ಪತ್ರ ಬರೆಯಲು ಸೂಚಿಸಲಾಗಿದೆ ಮತ್ತು ವಾರ್ಡ್ ವ್ಯಾಪ್ತಿಯಲ್ಲಿ 19ನೇ, 18ನೇ, 17ನೇ, 16ನೇ, 15ನೇ ಎ.ಬಿ.ಸಿ ಮುಖ್ಯರಸ್ತೆ ಮತ್ತು ಬೆಸ್ಕಾಂ ಕಛೇರಿ ರಸ್ತೆ, ಸರ್ವೀಸ್ ರಸ್ತೆ, 19ನೇ ಮತ್ತು 20ನೇ ಅಡ್ಡರಸ್ತೆಗಳಲ್ಲಿ ಹಗಲು ಮತ್ತು ರಾತ್ರಿ ವೇಳೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಕೆಲವು ದುಷ್ಕರ್ಮಿಗಳು ದರೋಡೆ, ಸರಪಳಿ, ಮೊಬೈಲ್ ಕಳ್ಳತನದ ಘಟನೆಗಳು ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ದುಷ್ಕರ್ಮಿಗಳ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು RWA ರವರು ಸಭೆಯಲ್ಲಿ ತಿಳಿಸಿದರು.

**<u>(ಕ್ರಮ:- ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು)</u>**

3. **<u>ಕಾಮಗಾರಿ ಇಲಾಖೆ:-</u>** ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ 6 ಸಿ.ಸಿ.ಕ್ಯಾಮರಗಳು ದುಸ್ಥಿತಿಯಲ್ಲಿದ್ದು, ಶೀಘ್ರವಾಗಿ ಸಿ.ಸಿ.ಕ್ಯಾಮರಗಳು ಸರಿಪಡಿಸಬೇಕೆಂದು ಮತ್ತು 4ನೇ ಮುಖ್ಯರಸ್ತೆ, 4ನೇ ಬ್ಲಾಕ್, 7ನೇ ಮತ್ತು 8ನೇ ಮುಖ್ಯರಸ್ತೆ 5ನೇ ಬ್ಲಾಕ್‌ನಲ್ಲಿ ಚರಂಡಿಗಳ ಹೂಳನ್ನು ತೆಗೆಯಲು ಮತ್ತು 9ನೇ ಅಡ್ಡರಸ್ತೆ, 3ನೇ ಬ್ಲಾಕ್, 4ನೇ ಬ್ಲಾಕ್ ವಿ.ಬಿ.ಆರ್ ಕಾಲೇಜು ಬಳಿ ಮಳೆ ನೀರಿನ ಚರಂಡಿಗಳನ್ನು ಸ್ವಚ್ಛಗೊಳಿಸಲು ಮತ್ತು 14ನೇ ಮುಖ್ಯರಸ್ತೆಯಿಂದ 19ನೇ ಮುಖ್ಯರಸ್ತೆವರೆಗೆ ಹಾಗೂ 20ನೇ ಕ್ರಾಸ್‌ನಿಂದ 45ನೇ ಕ್ರಾಸ್ ಮತ್ತು 1ನೇ ಕ್ರಾಸ್‌ವರೆಗಿನ ಅಡ್ಡರಸ್ತೆಗಳಲ್ಲಿ ಮಳೆ ನೀರಿನ ಚರಂಡಿಗಳ ಹೂಳನ್ನು ತೆಗೆಯಲು ಕ್ರಮ ಕೈಗೊಳ್ಳುವಂತೆ RWA ರವರು ಸಭೆಯಲ್ಲಿ ತಿಳಿಸಿದರು.

**(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್.ಲೇಔಟ್ ಉಪ-ವಿಭಾಗ)**

4. ವಾರ್ಡ್ ವ್ಯಾಪ್ತಿಯ ಹೆಣ್ಣೂರು ಮತ್ತು ಸುತ್ತಮುತ್ತಲಿನ ಪ್ರದೇಶದ ಮುಖ್ಯರಸ್ತೆಯಲ್ಲಿ ಇತ್ತೀಚೆಗೆ ಸುರಿದ ಬಾರಿ ಮಳೆಯಿಂದಾಗಿ ರಸ್ತೆಯಲ್ಲಿ ರಸ್ತೆಗುಂಡಿಗಳು ಬಿದ್ದಿದ್ದು, ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಹೆಚ್ಚಿನ ಅಪಘಾತಗಳು ಸಂಭವಿಸುವ ಸಾಧ್ಯತೆಗಳು ಇರುತ್ತವೆ. ಕೂಡಲೇ ರಸ್ತೆಯಲ್ಲಿ ಗುಂಡಿಗಳನ್ನು ದುರಸ್ಥಿ ಪಡಿಸಬೇಕೆಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುತ್ತಾರೆ.

ಈ ವಿಷಯದ ಬಗ್ಗೆ ರಸ್ತೆ ಮೂಲಭೂತ ಸೌಕರ್ಯ ಪೂರ್ವ ವಲಯ ಮತ್ತು ಬಿ.ಬಿ.ಎಂ.ಪಿ ಕಾಮಗಾರಿ ಇಲಾಖೆಗೆ ರವರಿಗೆ ಕ್ರಮಕೈಗೊಳ್ಳಲು ಅಧ್ಯಕ್ಷರು ಸೂಚಿಸಿರುತ್ತಾರೆ.

**<u>(ಕ್ರಮ:- ರಸ್ತೆ ಮೂಲಭೂತ ಸೌಕರ್ಯ ಪೂರ್ವ ವಲಯ ಮತ್ತು ಕಾಮಗಾರಿ ಇಲಾಖೆ ಬಿ.ಬಿ.ಎಂ.ಪಿ)</u>**

5. 44ನೇ ಮತ್ತು 45ನೇ ಅಡ್ಡರಸ್ತೆ 5ನೇ ಬ್ಲಾಕ್ ಹೆಚ್.ಬಿ.ಆರ್ ಬಡಾವಣೆಯಲ್ಲಿ ಅತಿಕ್ರಮಣ ಮಾಡಿರುವ ಬಿ.ಡಿ.ಎ ನಿವೇಶನಗಳ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆಯಲು ಅಧ್ಯಕ್ಷರು ಸಭೆಯಲ್ಲಿ ಸೂಚಿಸಿರುತ್ತಾರೆ.

6. **ಆರೋಗ್ಯಾಧಿಕಾರಿಗಳು:–** ವಾರ್ಡ್ ವ್ಯಾಪ್ತಿಯಲ್ಲಿ ಕೊರೋನ ಹಿನ್ನೆಲೆಯಲ್ಲಿ ಸೋಂಕು ತಡೆಗಟ್ಟುವಲ್ಲಿ ಸಾರ್ವಜನಿಕರು ವಹಿಸಬೇಕಾದ ಎಚ್ಚರಿಕೆ ಹಾಗೂ ಮುಂಜಾಗ್ರತೆಗಳಾದ Physical Distance Maintain ಮಾಡುವುದು, ಮಾಸ್ಕ್ ಧರಿಸುವುದು, ಜನರು ಗುಂಪುಗೂಡದಂತೆ ಇರುವುದು, ಸೊಳ್ಳೆ ನಿಯಂತ್ರಣಕ್ಕಾಗಿ 'ಪಾಂಗಿಂಗ್' ನಿಯಮಿತವಾಗಿ ಮಾಡಲು ಕೋರಿದರು. ಈ ಬಗ್ಗೆ ಸೂಕ್ತ ಕ್ರಮವಹಿಸಲು ಆರೋಗ್ಯ ವೈದ್ಯಾಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

<u>(ಕ್ರಮ :–ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು)</u>

7. **ಬೀದಿ ದೀಪಗಳ ನಿರ್ವಹಣೆ:–** ವಾರ್ಡ್ ವ್ಯಾಪ್ತಿಯಲ್ಲಿ 70–75 ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಬೀದಿ ದೀಪಗಳು ರಿಪೇರಿಯಲ್ಲಿದ್ದು, ಹೊಸ ಬೀದಿ ದೀಪಗಳನ್ನು ಅಳವಡಿಸಲು ಕೋರಿದರು. ಈ ಬಗ್ಗೆ ವಿದ್ಯುತ್ ವಿಭಾಗದಿಂದ ಕ್ರಮ ಕೈಗೊಳ್ಳಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

<u>(ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಪೂರ್ವ ಬೆಂಗಳೂರು)</u>

8. **ಬಿ.ಡಬ್ಲ್ಯೂ.ಎಸ್.ಎಸ್.ಬಿ:–** ವಾರ್ಡ್ ವ್ಯಾಪ್ತಿಯಲ್ಲಿ 18ನೇ ಮುಖ್ಯರಸ್ತೆ ಮತ್ತು 44ನೇ ಅಡ್ಡರಸ್ತೆಗಳಲ್ಲಿ ಮ್ಯಾನ್‌ಹೋಲ್ ಚೇಂಬರ್‌ಗಳಿಗೆ ಜೋಡಿಸಲಾದ ಪಂಪ್‌ಗಳು ಆಗಾಗ್ಗೆ ವಿಫಲವಾಗಿರುತ್ತದೆ. ಮತ್ತು 19ನೇ ಮತ್ತು ಮುಖ್ಯರಸ್ತೆ ಮತ್ತು 43ನೇ ಅಡ್ಡರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳಲ್ಲಿನ ಹೂಳನ್ನು ತೆಗೆಯಬೇಕೆಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು.

<u>(ಕ್ರಮ:– ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ–ವಿಭಾಗ ಕಲ್ಯಾಣನಗರ ಬೆಂಗಳೂರು)</u>

9. **ಘನತ್ಯಾಜ್ಯ ನಿರ್ವಹಣೆ:–** ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಹದಿನೈದು ದಿನಗಳಿಗೊಮ್ಮೆ ಆರೋಗ್ಯ ನಿರೀಕ್ಷಕರು ತಪಾಸಣೆ ಮತ್ತು ಬಡಾವಣೆಯ ರಸ್ತೆಗಳ ಸ್ವಚ್ಛತೆಯ ಬಗ್ಗೆ ಹಾಗೂ ರಸ್ತೆಗಳಲ್ಲಿ ಕಸ ಮತ್ತು ಪ್ರಾಣಿಗಳ ತ್ಯಾಜ್ಯವನ್ನು ಎಸೆಯುವವರಿಗೆ ದಂಡವನ್ನು ವಿಧಿಸಬೇಕೆಂದು ಸದಸ್ಯರು ಸಭೆಯಲ್ಲಿ ತಿಳಿಸಿದರು.

<u>(ಕ್ರಮ:– ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ಉಪ–ವಿಭಾಗ ಬೆಂಗಳೂರು)</u>

ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪವಾಗಿದ್ದ ಬಹುತೇಕ ಸಾರ್ವಜನಿಕ ಸಮಸ್ಯೆಗಳನ್ನು ಪರಿಹರಿಸಲು ತುರ್ತಾಗಿ ಕ್ರಮ ವಹಿಸಲಾಗುವುದೆಂದು ಹಾಗೂ ಇಂದಿನ ಸಭೆಯಲ್ಲಿ ಮಂಡಿಸಲಾದ ಕುಂದು ಕೊರತೆಗಳನ್ನು ಶೀಘ್ರದಲ್ಲಿ ಪರಿಹರಿಸಲಾಗುವುದೆಂದು ಸಭೆಗೆ ತಿಳಿಸಿದ ಅಧಿಕಾರಿ ವರ್ಗದವರಿಗೆ ಸಮಿತಿಯ ಕಾರ್ಯದರ್ಶಿಯವರು ವಂದನೆಗಳನ್ನು ಸಲ್ಲಿಸಿ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

| | |
|---|---|
| 25/1/21 | |
| ಶ್ರೀಮತಿ.ಸಾವಿತ್ರಿ | ಶ್ರೀಮತಿ.ರೇಣುಕಾ ಸ್ವಾದಿ |
| ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ 24 ಹೆಚ್.ಬಿ.ಆರ್ ಬಡಾವಣೆ | ವಾರ್ಡ್ ಸಂಖ್ಯೆ.24 ಹೆಚ್.ಬಿ.ಆರ್ ಬಡಾವಣೆ |

<u>ಪ್ರತಿಯನ್ನು:</u>

1. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) 16ನೇ ಮಹಡಿ, ಪಿ.ಯು.ಬಿ. ಬಿಲ್ಡಿಂಗ್ ಮೇಯೋಹಾಲ್ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಲ್ಯಾಣನಗರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಉಪ ವಿಭಾಗ ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
10. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಆರಕ್ಷಕ ವೃತ್ತ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಕಛೇರಿ ಕಡತಕ್ಕೆ.